ಹಾಗೂ ಡಾಕ್ಟರ್ ಜಗನ್ನಾಥ ಅವರಿಗೆ ಎಮ್. ಎಸ್. (ಜನರಲ್ ಸರ್ಜರಿ)ಗೆ ಆಯ್ಕೆ ಮಾಡಲಾಗಿದ್ದಿತು ನಂತರ ಡಾ॥ ವೆಂಕಟರಮಣ ಇವರು ಸಲ್ಲಿಸಿದ ಜಾತಿ ಸರ್ಟಿಫಿಕೇಟು ಸತ್ಯವಾದುದ್ದಲ್ಲವೆಂದು ತಿಳಿದು ಬಂದಿತು. ಈ ವೈದ್ಯರು ಸಲ್ಲಿಸಿದ ಜಾತಿ ಸರ್ಟಿಫಿಕೇಟನ್ನು ಕಸ್ತೂರಬಾ ಮೆಡಿಕಲ್ ಕಾಲೇಜು ಮಂಗಳೂರಿನ ಪ್ರಾಂಶುಪಾಲರಿಂದ ತರಿಸಿ ತನಿಖೆ ಮಾಡಿದಾಗ ಅವರು ಗ್ರೂಪ್ ''ಬಿ'' ಗೆ ಸೇರಿದವರಲ್ಲವೆಂದು ಸ್ಪಷ್ಟವಾಯಿತು. ಆದ್ದರಿಂದ ಡಾಕ್ಟರ್ ವೆಂಕಟರಮಣ ಅವರಿಗೆ ನೀಡಿದ ಎಮ್.ಡಿ. ಮೆಡಿಸಿನ್ ಸ್ಥಾನವನ್ನು ರದ್ದುಗೊಳಿಸಿ ಆಯ್ಕೆ ಪಟ್ಟಿಯಲ್ಲಿ ಕ್ರಮಾಂಕ ೩೫ರಲ್ಲಿದ್ದ ಡಾ. ರವಿನಾಯಕ ಅವರಿಗೆ ಈ ಸ್ಥಾನವನ್ನು ನೀಡಲಾಗಿದೆ.

ಡಾ. ಜಗನ್ನಾಥ ಅವರು ಆಯ್ಕೆ ಪಟ್ಟಿಯಲ್ಲಿ ಕ್ರಮಾಂಕ ೨೫೦ನೇ ಸ್ಥಾನದಲ್ಲಿದ ರೂ ಕೂಡ ಡಾ:ವೆಂಕಟರಮಣ ಇವರ ಆಯ್ಕೆಯನ್ನು ರದ್ದುಪಡಿಸಿದುದರಿಂದ ದೊರಯುವ ಎಮ್.ಡಿ.(ಜನರಲ್ ಮೆಡಿಸನ್) ಸ್ಥಾನವು ಸಿಗುವುದಿಲ್ಲ. ಯಾಕೆಂದರೆ ಕರ್ನಾಟಕ ಮೆಡಿಕಲ್ ಕಾಲೇಜಸ್ ಆ್ಯಂಡ್ ಡೆಂಟಲ್ ಕಾಲೇಜಸ್ (ಸೆಲೆಕ್ಷನ್ ಫಾರ್ ಅಡ್ಮಿಶನ್ ಟು ಪೋಸ್ಟ್ ಗ್ರ್ಯಾಜುಯೇಟ್ಸ್ ಕೋರ್ಸಸ್)ರೂಲ್ಸ್. ೧೯೮೭ ಇದರ ನಿಯಮ ೧೧ರ ಮೇರೆಗೆ ಒಮ್ಮೆ ಆಯ್ಕೆಯಾದ ಅಭ್ಯರ್ಥಿಗೆ ತೆರವಾಗುವ ಬೇರೆ ಯಾವ ಸ್ಥಾನವನ್ನು ಕೊಡಲು ಅವಕಾಶವಿಲ್ಲ. ನಿಯಮ ೧೧ರ ಪೂರ್ತಿ ಪಾಠ ಈ ರೀತಿ ಇದೆ.

> " 11 VACANCIES:— Any vacancy due to the failure of a selected candidate to join the college within the last date and time specified by the selection committee or for any other reason, such seats shall be filled by the selection committee from among the next avilable candidates. However, while filling the vacancies, candidates who are already selected for any course shall not be considered."

ಮೇಲಿನ ಅಂಶಗಳನ್ನು ಗಮನಿಸಿದಾಗ ಡಾ: ಜಗನ್ನಾಥ ಅವರ ಆಯ್ಕೆಯ ವಿಷಯದಲ್ಲಿ ಯಾವುದೇ ನಿಯಮ ಬಾಹಿರ ಕ್ರಮ ತೆಗೆದು ಕೊಂಡಿಲ್ಲ ಎಂಬುದು ಸ್ಪಷ್ಟವಾಗುವದು.

ಈ ವಿಷಯದಲ್ಲಿ ಡಾ. ಜಗನ್ನಾಥರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಇದಂ ವಿಚಾರಣೆಗೆ ಬಾಕಿ ಇದೆ.

೭ ಗುಂಡ್ಲುಪೇಟೆ ತಾಲ್ಲೂಕಿಗೆ ಸ್ಪೆಷಲ್ ಸ್ಕೀಮ್ ಮೂಲಕ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ — ಮಾನ್ಯ ಅಧ್ಯಕ್ಷರೇ, ಅನೇಕ ಜನರು ಗುಂಡ್ಲುಪೇಟೆಯಲ್ಲಿ ಬ್ಯಾಂಕ್ ಹಾಗೂ ಸೊಸೈಟಿಗಳಿಂದ ಸಾಲವನ್ನು ತೆಗೆದುಕೊಂಡು ಪಂಪ್‌ಸೆಟ್ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಇವತ್ತು ಅವರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸದೇ ಇದ್ದು ಅತ್ತಕಡೆ ಬ್ಯಾಂಕ್‌ನವರಿಂದಲೂ ಅವರು ಹಿಂಸೆ ಪಡುತ್ತಿರುವ ಕಷ್ಟದ ಪರಿಸ್ಥಿತಿ ನಮ್ಮ ಭಾಗದ ಜನರದ್ದಾಗಿದೆ. ನಮ್ಮ ತಾಲ್ಲೂಕಿಗೆ ಏನು ಶಾಪವೋ, ನಮ್ಮ ತಾಲ್ಲೂಕು ರೈನ್ ಶಾಡೋ ಏರಿಯಾ ಎಂದು, ಫ್ಲಾಮಿನ್ ಸ್ಟ್ರೀಕನ್ ಏರಿಯಾ ಎಂದು, ಆರಿಡ್ ಜೋನ್ ಎಂದು ಡಿಕ್ಲೇರ್ ಆಗಿರುತ್ತದೆ. ಇಂತಹ ಏರಿಯಾ ಬಗ್ಗೆ ನಾವು ಇಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ, ಮಂತ್ರಿಗಳಿಗೆ ಹೇಳಿ ಅಲ್ಲಿಗೆ ವೈರು ಅದು ಇದು ಅಗೈರೆ ವಸ್ತುಗಳನ್ನು ಒದಗಿಸಲು ಪೇಳಿರುತ್ತೇವೆ. ಆಪ್ರಕಾರ ಒದಗಿಸಿದಾಗ ಅದು ಮೈಸೂರು ಮಂಟ್ಟುಪಪ್ಪರಲ್ಲಿ ಅಲ್ಲಿ ಇಲ್ಲಿ ಹೋಗಿರುತ್ತದೆ. ಮತ್ತೆ ಉಳಿಕೆಯದ್ದು ನಮ್ಮ ತಾಲ್ಲೂಕಿಗೇ ಮಂಟ್ಟುವುದಿಲ್ಲ. ಇಂತಹ ಕಷ್ಟ ಸ್ಥಿತಿಯಲ್ಲಿ ಇರುವ ನಮ್ಮ ಗುಂಡ್ಲುಪೇಟೆ ತಾಲ್ಲೂಕಿಗೆ ಸಹಾಯ ಮಾಡುವ ಸಲುವಾಗಿ ಈ ತಾಲ್ಲೂಕಿಗೇ ಏನಾದರೂ ಸ್ಪೆಷಲ್ ಸ್ಕೀಮ್ ಹಾಕಿ ಸಾಮಗ್ರಿಗಳನ್ನು ಒದಗಿಸುತ್ತೀರಾ? ಇವತ್ತು ಅಲ್ಲಿ ಕೇಳಿದರೆ ಛಾನಲ್ ಇಲ್ಲ ಎನ್ನುತ್ತಾರೆ, ಕೊನೆಗೆ ಫ್ಯೂಸ್ ವೈರ್ ಕೂಡಾ ಅಲ್ಲಿ ಸಿಕ್ಕುತ್ತಾ ಇಲ್ಲ. ಇವತ್ತು ಅಲ್ಲಿ ಸಿಂಗಲ್‌ಫ್ಯೂಸ್ ಆಗಿ ನಡೆಯುತ್ತಿರುವ ಪಂಪುಸೆಟ್ಟುಗಳೆಲ್ಲಾ ಸುಟ್ಟು ಭಸ್ಮ ಆಗಿರುವುದಲ್ಲದೆ ಆ ರೈತ ಸಹಾ ಸುಟ್ಟು ಹೋಗಿದ್ದಾನೆ. ಇಂತಹ ಜನರಿಗೆ ಹೆಚ್ಚು ಸಹಾಯ ಮಾಡುವುದಕ್ಕೆ ಗುಂಡ್ಲುಪೇಟೆಗೆ ಒಂದು ಸ್ಪೆಷಲ್ ಸ್ಕೀಮ್ ಹಾಕಿ ಸಲಕರಣೆ ಸರಬರಾಜು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದಿನಾಂಕ ೩೧ನೇ ಮಾರ್ಚ್ ೧೯೮೯ರಲ್ಲಿ ೨೨.೯೬೪ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗಿತ್ತು. ಈ ಸಾಲಿನಲ್ಲಿ (೧೯೮೯-೯೦) ಫೆಬ್ರುವರಿ ೧೯೯೦ರ ಅಂತ್ಯದ ವರೆಗೆ ೨೧೨ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ. ಈ ಸಾಲಿನ ಗುರಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ೫೫೦ ಆಗಿದ್ದಿತು. ೨೮ನೇ ಫೆಬ್ರುವರಿ ೧೯೯೦ರಲ್ಲಿರುವಂತೆ ಈ ತಾಲ್ಲೂಕಿನಲ್ಲಿ ಒಟ್ಟು ೩,೧೭೬ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗಿದೆ. ಫೆಬ್ರುವರಿ ೧೯೯೦ರ ಅಂತ್ಯದ ವೇಳೆಗೆ ಈ ತಾಲ್ಲೂಕಿನಲ್ಲಿ ೩೭೩ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳು ಬಾಕಿ ಉಳಿದಿದ್ದು, ಇವುಗಳ ಪೈಕಿ ೩೧೫ ಅರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿದ್ದವು.

ಮಂಡಳಿಯು ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಸರ್ಕಾರವು ಅಂಗೀಕರಿಸುವ ರೋಸ್ಟರ್ ಪದ್ಧತಿಯಲ್ಲಿ ಪೂರೈಸುತ್ತಿದೆ. ಈ ರೋಸ್ಟರ್ ವ್ಯವಸ್ಥೆಯು ವಿದ್ಯುಚ್ಛಕ್ತಿ ಪೂರೈಕೆಗಾಗಿ ಬೇಕಾಗಿರುವ ಕಂಬಿಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹೆಚ್ಚು ಕಂಬಿಗಳು ಬೇಕಾದಲ್ಲಿ ವಿದ್ಯುತ್ ಪೂರೈಕೆಗಾಗಿ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ನೂರು ಬಾವಿ ಯೋಜನೆಯಡಿಯಲ್ಲಿ ನೊಂದಾಯಿಸಿರುವ ಅರ್ಜಿದಾರರನ್ನು ಈ ರೋಸ್ಟರ್ ವ್ಯವಸ್ಥೆಯಿಂದ ತೆಗೆಯಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಜಿದಾರರಿಗೆ ಪ್ರಥಮ ಆದ್ಯತೆಯನ್ನೂ ಮತ್ತು ನೂರು ಬಾವಿ ಯೋಜನೆಯಲ್ಲಿನ ಅರ್ಜಿದಾರರಿಗೆ ನಂತರದ ಆದ್ಯತೆಯನ್ನೂ ನೀಡಲಾಗಿದೆ. ಉಳಿದವರಿಗೆ ರೋಸ್ಟರ್‌ನಲ್ಲಿರುವ ಹಿರಿತನದ ಮೇರೆಗೆ ವಿದ್ಯುತ್ ಪೂರೈಸಲಾಗುವುದು.

ರಾಜ್ಯದಲ್ಲಿ ಪ್ರತಿ ವರ್ಷವೂ ಸುಮಾರು ೬೦,೦೦೦ ರಿಂದ ೭೦,೦೦೦ದವರೆಗೆ ಪಂಪುಸೆಟ್ಟುಗಳಿಗಾಗಿ ಹೊಸ ಅರ್ಜಿಗಳು ನೋಂದಾಯಿತವಾಗುತ್ತಿವೆ. ರಾಜ್ಯದಲ್ಲಿ ೩೧ನೇ ಜನವರಿ ೧೯೯೦ ರಲ್ಲಿರುವಂತೆ ೬೩,೬೧೯ ಅರ್ಜಿಗಳು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಬಾಕಿ ಉಳಿದಿದ್ದವು ಇವುಗಳ ಪೈಕಿ ೫೯,೬೫೨ ಅರ್ಜಿಗಳು ಮಂಡಳಿಯ ಕ್ರಮಕ್ಕಾಗಿ ಬಾಕಿ ಇದ್ದವು. ಮಂಡಳಿಯು ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಅವಲಂಬಿಸಿ, ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗದಿಪಡಿಸಿರುವುದರಿಂದ, ಗುರಿಮೀರಿದ ಸಾಧನೆಯನ್ನು ಸಾಧಿಸಿ, ಎಲ್ಲಾ ಬಾಕಿ ಉಳಿದ ಅರ್ಜಿದಾರರಿಗೆ ವಿದ್ಯುಚ್ಛಕ್ತಿಯನ್ನು ಒಂದೇ ವರ್ಷದಲ್ಲಿ ಪೂರೈಕೆ ಮಾಡುವುದು ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಬಹಳ ಕಷ್ಟಕರ.

ಈ ವರ್ಷದ (೧೯೯೦-೯೧)ರ ಅವಧಿಯಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಗ್ರಿಗಳ ಸ್ವಲ್ಪ ಕೊರತೆಯಿದ್ದು, ಈಗ ಅದನ್ನು ನೀಗಿಸಲಾಗಿದೆ. ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣದ ಗುರಿಯಾದ ೪೦,೦೦೦ವನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಹಾಗೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಹ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ಈಗಾಗಲೇ ಒದಗಿಸಿರುವುದರಿಂದ ಮಂಡಳಿಯ ಕ್ರಮಕ್ಕಾಗಿ ಬಾಕಿ ಉಳಿದಿರುವ ಎಲ್ಲಾ ಅರ್ಜಿದಾರರಿಗೂ ಶೀಘ್ರದಲ್ಲೇ ಒದಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಪ್ರಕಟಣೆ

ಅಧ್ಯಕ್ಷರು.—ವಿಧಾನಪರಿಷತ್ತಿನ ಸಭಾಪತಿಯವರಿಂದ ಒಂದು ಸಂದೇಶ ಬಂದಿದೆ. ನಿಯಮ ೧೧೪ರ ಮೇರೆಗೆ ಈ ಕೆಳಕಂಡ ವಿಧೇಯಕಗಳನ್ನು ವಿಧಾನಪರಿಷತ್ತಿನಲ್ಲಿ ದಿನಾಂಕ ೩೦-೩-೧೯೯೦ ರಂದು ಅನುಮೋದಿಸಲಾಗಿದೆಯೆಂದು ತಿಳಿಸಿರುತ್ತಾರೆ. ವಿಧೇಯಕಗಳು ಈ ಕೆಳಕಂಡಂತಿವೆ.

ಕರ್ನಾಟಕ ಧನ ವಿನಿಯೋಗ ವಿಧೇಯಕ ೧೯೯೦

೧೯೯೦ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು, ಮತ್ತು ಉದ್ಯೋಗಗಳ ತಿದ್ದುಪಡಿ ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ

೧೯೯೦ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ